**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**SC. No. 218/2023**
**C/w 130/2025**
**C/w 18/2026**

ದಿನಾಂಕ : **03.06.2026.**

ಕರ್ನಾಟಕ ಸರ್ಕಾರದ ಪರವಾಗಿ ಬ್ಯಾಡರಹಳ್ಳಿ ಪೊಲೀಸ್ ಠಾಣೆ.

: ಪಿರ್ಯಾದುದಾರರು.

ವಿರುದ್ಧ

ಎ1 ವಾಸು ಕೆ @ ಅಂದ್ರಹಳ್ಳಿ ವಾಸು ಬಿನ್ ಲೇಟ್ ಮಿಲಿಟರಿ ಕೃಷ್ಣಪ್ಪ, 33 ವರ್ಷ, ವಾಸಃ ನಂ. 299, ಧನಲಕ್ಷ್ಮಿ ಬಾರ್ ಎದುರಿನ ರಸ್ತೆ, ಆಂದ್ರಹಳ್ಳಿ ಮೈನ್ ರಸ್ತೆ, ಬೆಂಗಳೂರು.

ಎ2 ವಿಕಾಸ್ ಎಸ್ ಬಿನ್ ಲೇಟ್ ಶಿವಲಿಂಗಯ್ಯ, 33 ವರ್ಷ, ವಾಸಃ ನಂ. 107, 6 ನೇ ಮುಖ್ಯ ರಸ್ತೆ, 6 ನೇ ತಿರುವು, ಶ್ರೀರಾಮ್ ನಗರ, ಬಿ.ಎಸ್.ಕೆ 3 ನೇ ಹಂತ, ಸಾಯಿ ಗಾರ್ಮೆಂಟ್ಸ್ ಪಾಪರೆಡ್ಡಿ ಪಾಳ್ಯ, ಬೆಂಗಳೂರು

ಎ4 ಮಹೇಶ್ ಎಸ್ ಬಿನ್ ಸುಬ್ರಮಣಿ, 30 ವರ್ಷ, ವಾಸಃ ನಂ. 231, ಮಂಜುನಾಥ ಕಾಲೋನಿ, ವಿದ್ಯಾಪೀಠ, ಬನಶಂಕರ, ಬೆಂಗಳೂರು.

ಎ5 ಲೋಕೇಶ್ @ ಬಾಬು ಬಿನ್ ಲೇಟ್ ಗೌಡಯ್ಯ, 36 ವರ್ಷ, ವಾಸಃ ನಂ. 14, 4 ನೇ ತಿರುವು, ಆಶ್ರಯ ಲೇಔಟ್, ಬೆಂಗಳೂರು 560 091.

: ಆರೋಪಿತರು.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅನ್ವಯ ಆರೋಪಿಯ ಹೇಳಿಕೆ : -

<u>ಪ್ರಶ್ನೆ **: 1-**</u> ಈ ಪ್ರಕರಣದಲ್ಲಿ ಸಾಕ್ಷಿ ನುಡಿದಿರುವ ಎಲ್ಲಾ ಸಾಕ್ಷಿದಾರರ ಸಾಕ್ಷಿ ಹೇಳಿಕೆಗಳನ್ನು ಕೇಳಿ ಅರ್ಥೈಸಿಕೊಂಡಿರುತ್ತೀರೋ?

<u>ಉತ್ತರಃ -</u> ಎ1

ಎ2

ಎ4

ಎ5

ಪ್ರಶ್ನೆ **: 2** ಫ್ರಾಸಾ-1 / ರವಿಕುಮಾರ್ ರವರು ಸಾಕ್ಷಿ ನುಡಿಯುತ್ತಾ ದಿನಾಂಕ 15.01.2021 ರಂದು ಸಂಜೆ 6.30 ಕ್ಕೆ CCB ಸಂಘಟಿತ ಅಪರಾಧ ದಳದ PI ಮುರುಗೇಂದ್ರಯ್ಯ ರವರು ಗಿರೀಶ್ ನಾಯಕ್ PI, ಅವರು, ಸಿಬ್ಬಂದಿಗಳಾದ HC ಅರುಣ್ ಕುಮಾರ್, HC ನರಸಿಂಹಮೂರ್ತಿ, HC ಯೋಗಾನಂದ್, HC ಗೋಪಾಲ್, HC ಹರೀಶ್ ರವರನ್ನು ಮತ್ತು ಪಂಚರಾದ ಕೌಶಿಕ್ ಮತ್ತು ಕಾರ್ತಿಕ್ ರವರನ್ನು ಕಛೇರಿಗೆ ಬರಮಾಡಿಕೊಂಡು ಬ್ಯಾಡರಹಳ್ಳಿ ಠಾಣೆಯ ಅಂಜನಾ ನಗರ ಸಮೀಪ ಇರುವ ಮಾಗಡಿ ರಸ್ತೆಯಿಂದ ವಿಶ್ವೇಶ್ವರಯ್ಯ ಲೇಔಟ್ ನಲ್ಲಿ ಯಾರೋ 4 – 5 ಕೈ ಗಳಲ್ಲಿ ಮಾರಾಕಾಸ್ತ್ರಗಳನ್ನು ಹಿಡಿದುಕೊಂಡು ಪಿಸು ಪಿಸು ಎಂದು ಮಾತನಾಡಿಕೊಳ್ಳುತ್ತಿದ್ದು ಹಾಗೂ ಅವರ ಚಲನ ವಲನ ಗಮನಿಸಿದಾಗ ಸಾರ್ವಜನಿಕರಿಂದ ಹಣ ಮತ್ತು ಒಡವೆಗಳನ್ನು ದರೋಡೆ ಮತ್ತು ಸುಲಿಗೆ ಮಾಡಲು ಸಜ್ಜಾಗಿದ್ದಾರೆ ಎಂದು ಕಂಡು ಬಂತು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ2

ಎ4

ಎ5

ಪ್ರಶ್ನೆ **: 3** ಫ್ರಾಸಾ-1 / ರವಿಕುಮಾರ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಅವರು ಸುತ್ತು ವರಿದು 4 ಆಸಾಮಿಗಳನ್ನು ಹಿಡಿದುಕೊಂಡಿದ್ದು, PI ಮುರುಗೇಂದ್ರಯ್ಯ ರವರು 1 ನೇ ಆರೋಪಿ ವಾಸು ಆದ ನಿನ್ನನ್ನು ಹಿಡಿದುಕೊಂಡಿದ್ದು ಹಾಗೂ ನಿನ್ನ ಬಳಿ 22.5 ಇಂಚು ಉದ್ದ ಹಾಗೂ 4 ಇಂಚು ಅಗಲವಿರುವ ಒಂದು ಲಾಂಗ್ ಇತ್ತು, PI ಗಿರೀಶ್ ರವರು 2 ನೇ ಆರೋಪಿ ವಿಕಾಸ್ ಆದ ನಿನ್ನನ್ನು ಹಿಡಿದುಕೊಂಡಿದ್ದು ಹಾಗೂ ನಿನ್ನ ಬಳಿ 27 ಇಂಚು ಉದ್ದ ಹಾಗೂ 2.5 ಇಂಚು ಅಗಲವಿರುವ ಒಂದು ಲಾಂಗ್ ಇತ್ತು, ಅವರು 3 ನೇ ಆರೋಪಿ ಚಂದ್ರಶೇಖರ್ ರವರನ್ನು ಹಿಡಿದುಕೊಂಡಿದ್ದು ಹಾಗೂ ಅವರ ಬಳಿ 30 ಇಂಚು ಉದ್ದ ಹಾಗೂ 4 ಇಂಚು ಸುತ್ತಳತೆ ಇರುವ ಒಂದು ಮರದ ದೊಣ್ಣೆ ಇತ್ತು, HC ಅರುಣ್ ರವರು 4 ನೇ ಮಹೇಶ್ ಆದ ನಿನ್ನನ್ನು ಹಿಡಿದುಕೊಂಡಿದ್ದು ಹಾಗೂ ನಿನ್ನ ಬಳಿ 24.5 ಇಂಚು ಉದ್ದ ಹಾಗೂ 4 ಇಂಚು ಸುತ್ತಳತೆ ಇರುವ ಒಂದು ಮರದ ದೊಣ್ಣೆ ಮತ್ತು ಖಾರದ ಪುಡಿ ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ 1

ಎ2

ಎ4

ಎ5

ಪ್ರಶ್ನೆ **: 4** ಫ್ರಾಸಾ-1 / ರವಿಕುಮಾರ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಓಡಿ ಹೋದವರ ಹೆಸರು 5 ನೇ ಲೋಕೇಶ್ ಆದ ನೀನು ಎಂದು ತಿಳಿದು ಬಂದಿದ್ದು ವಶಪಡಿಸಿಕೊಂಡ ವಸ್ತುಗಳನ್ನು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ OCW ಎಂದು ಸೀಲ್ ಮಾಡಿ ಪಂಚರ ಸಮಕ್ಷಮ ಮಹಜರ್ ಮಾಡಿ ಜಪ್ತಿ ಪಡಿಸಿದ್ದು ಹಾಗೂ ಪಂಚರ ಹಾಗೂ PI ಮುರುಗೇಂದ್ರಯ್ಯ ರವರ ಸಹಿಗಳನ್ನು ಒಂದು ಚೀಟಿಯಲ್ಲಿ ಮು.ಮಾ. ಗಳ ಅಂಟಿಸಿದ್ದು ನಂತರ ಮಹಜರ್ ಗೆ ಅವರು ಸಹ ಸಹಿ

ಮಾಡಿದ್ದು ನಂತರ ಜಪ್ತಿ ಮಾಡಿದ ಮಾಲು ಮತ್ತು ಆರೋಪಿತರಾದ ನಿಮ್ಮೊಂದಿಗೆ ಠಾಣೆಗೆ ವಾಪಸ್ಸು ಬಂದಿದ್ದು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ2

ಎ4

ಎ5

ಪ್ರಶ್ನೆ **: 5** ಫ್ರಾಸಾ-2 / ಎಂ. ಮುರುಗೇಂದ್ರಯ್ಯ ರವರು ಸಾಕ್ಷಿ ನುಡಿಯುತ್ತಾ ದಿನಾಂಕ 15.01.2021 ರಂದು ಸಂಜೆ 6.10 ರ ಸುಮಾರಿಗೆ ಅವರಿಗೆ ಬಂದ ಖಚಿತ ಬಾತ್ಮಿಯ ಮೇರೆಗೆ ಅವರು ಕೂಡಲೇ ಇಬ್ಬರು ಪಂಚರಾದ ಕಾರ್ತಿಕ್ ಮತ್ತು ಕೌಶಿಕ್ ರವರನ್ನು ನೋಟೀಸ್ ನೀಡಿ ಕರೆಸಿಕೊಂಡಿದ್ದು ನಂತರ ಅವರ ಸಿಬ್ಬಂದಿಗಳಾದ ಗಿರೀಶ್, ರವಿಕುಮಾರ್, ಅರುಣ್ ಕುಮಾರ್, ನರಸಿಂಹಮೂರ್ತಿ, ಗೋಪಾಲ್ ಮತ್ತು ಯೋಗಾನಂದ್, ಹರೀಶ್ ಹಾಗೂ ಪಂಚರಿಗೆ ಬಾತ್ಮಿಯ ಬಗ್ಗೆ ತಿಳಿಸಿದ್ದು, ನಂತರ ಅವರೆಲ್ಲರೂ 2 ವಾಹನಗಳಲ್ಲಿ ಬಾತ್ಮಿ ಬಂದ ಸ್ಥಳ ಅಂಜನಾ ನಗರ, ಮಾಗಡಿ ರಸ್ತೆಗೆ ಸಂಜೆ 6.40 ಕ್ಕೆ ಠಾಣೆ ಬಿಟ್ಟು 7.30 ಗಂಟೆಗೆ ತಲುಪಿದ್ದು, ಮರೆಯಲ್ಲಿ ನಿಂತು ಗಮನಿಸಿದಾಗ ಸದರಿ ಸ್ಥಳದಲ್ಲಿ 4 - 5 ಜನ ವ್ಯಕ್ತಿಗಳು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಸಾರ್ವಜನಿಕರನ್ನು ದೋಚಲು ಹೊಂಚು ಹಾಕುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ2

ಎ4

ಎ5

ಪ್ರಶ್ನೆ : **6** ಫ್ರಾಸಾ-2 / ಎಂ. ಮುರುಗೇಂದ್ರಯ್ಯ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಅವರುಗಳು ನಿಮ್ಮನ್ನು ಸುತ್ತುವರೆದು ಹಿಡಿದುಕೊಂಡಾಗ 4 ಜನ ಸಿಕ್ಕಿದ್ದು, ಒಬ್ಬ ಓಡಿಹೋಗಿದ್ದು ಅವರು ಹಿಡಿದುಕೊಂಡ ಆಸಾಮಿಯ ಹೆಸರು 1 ನೇ ವಾಸು @ ಅಂದ್ರಹಳ್ಳಿ ವಾಸು ಆದ ನೀನು ಆಗಿದ್ದು ಹಾಗೂ ನಿನ್ನ ಬಳಿ 1 ಲಾಂಗ್ ದೊರೆತಿದ್ದು ವಶಕ್ಕೆ ಪಡೆದಿದ್ದು, PI ಗಿರೀಶ್ ರವರು 2 ನೇ ಆರೋಪಿ ವಿಕಾಸ್ ಆದ ನೀನು ಆಗಿದ್ದು ಹಾಗೂ ನಿನ್ನ ಬಳಿ ಲಾಂಗ್ ಇತ್ತು, ಸಿಬ್ಬಂದಿ ರವಿಕುಮಾರ್ 3 ನೇ ಆರೋಪಿ ಚಂದ್ರಶೇಖರ್ ನನ್ನನ್ನು ಹಿಡಿದಿದ್ದು ಹಾಗೂ ಆತನ ಬಳಿ ದೊಣ್ಣೆ ಇತ್ತು, ಸಿಬ್ಬಂದಿ ಅರುಣ್ ಕುಮಾರ್ ರವರು 4 ನೇ ಆರೋಪಿ ಮಹೇಶ್ ಆದ ನಿನ್ನನ್ನು ಹಿಡಿದಿದ್ದು, ನಿನ್ನ ಬಳಿ 1 ದೊಣ್ಣೆ ಮತ್ತು ಖಾರದ ಪುಡಿ ಪೊಟ್ಟಣ ಇತ್ತು ಹಾಗೂ 5 ನೇ ಆರೋಪಿ ಲೋಕೇಶ್ ಆದ ನೀನು ಓಡಿಹೋದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ2

ಎ4

ಎ5

ಪ್ರಶ್ನೆ : **7** ಫ್ರಾಸಾ-2 / ಎಂ. ಮುರುಗೇಂದ್ರಯ್ಯ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ನಂತರ ದೊರೆತ ಆಯುಧಗಳನ್ನು ಪಂಚನಾಮೆ ಮುಖಾಂತರ ವಶ ಪಡಿಸಿಕೊಂಡು ಬಿಳಿ ಬಟ್ಟೆಯಿಂದ ಸೀಲ್ ಮಾಡಿದ್ದು ಪಂಚನಾಮೆಯನ್ನು ರಾತ್ರಿ 7.40 ರಿಂದ 8.30 ಗಂಟೆಯವರೆಗೆ ಸ್ಥಳದಲ್ಲಿ ತಯಾರಿಸಿದ್ದು ನಂತರ ಪೊಲೀಸ್ ಠಾಣೆಗೆ ಹೋಗಿ ವಿವರವಾದ ದೂರನ್ನು ನೀಡಿ ಆರೋಪಿತರಾದ ನಿಮ್ಮನ್ನು ಮತ್ತು ಮು.ಮಾ. ಗಳನ್ನು ವಶಕ್ಕೆ ಕೊಟ್ಟಿದ್ದರು ನಂತರ ದಿನಾಂಕ 18.01.2021 ರಂದು

ಅವರ ಸಿಬ್ಬಂದಿ 5 ನೇ ಆರೋಪಿಯಾದ ನಿನ್ನನ್ನು ಅವರ ಸಮಕ್ಷಮ ಹಾಜರು ಪಡಿಸಿದ್ದು, ನಿನ್ನನ್ನು ವರದಿಯೊಂದಿಗೆ ಪಿ.ಐ. ಬ್ಯಾಡರಹಳ್ಳಿ ಅವರ ಮುಂದೆ ಹಾಜರು ಪಡಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

ಉತ್ತರಃ - ಎ 1

ಎ 2

ಎ 4

ಎ 5

**ಪ್ರಶ್ನೆ : 8 -** ನೀವು ಏನಾದರು ಹೇಳುವುದು ಇದೆಯಾ ?

ಉತ್ತರಃ - ಎ 1

ಎ 2

ಎ 4

ಎ 5

**ಪ್ರಶ್ನೆ : 9 -** ನಿಮ್ಮ ಪರ ಯಾರಾದರೂ ಸಾಕ್ಷಿಗಳನ್ನು ವಿಚಾರಣೆ ಮಾಡುವಿರಾ ?

ಉತ್ತರಃ - ಎ 1

ಎ 2

ಎ 4

ಎ 5

(ಆರೋಪಿ ನಂ. 1, 2, 4 ಮತ್ತು 5 ರವರ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವಂತೆ ವಿವರಿಸಿ ಓದಿ ಹೇಳಿದಾಗ

ಅವರು ನೀಡಿರುವ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆ ಎಂದು ಈ ಮೂಲಕ ಧೃಢೀಕರಿಸುತ್ತಿದ್ದೇನೆ)

**(ಬಿ.ಎಸ್. ರೇಖಾ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

1 ನೇ ಆರೋಪಿಯ ಸಹಿ.

2 ನೇ ಆರೋಪಿಯ ಸಹಿ.

4 ನೇ ಆರೋಪಿಯ ಸಹಿ.

5 ನೇ ಆರೋಪಿಯ ಸಹಿ.